ಸೂರ್ಯನ ಚುರುಕು ಕಿರಣಗಳು ಕಿಟಕಿಯ ಗಾಜನ್ನು ತೂರಿಕೊಂಡು ಮಂಚದ ಮೇಲೆ ಮಲಗಿದ್ದ ಬ್ರೆಕ್ಟನ ಮುಖದ ಮೇಲೆ ಬಿದ್ದು ಅವನನ್ನು ಎಚ್ಚರಗೊಳಿಸಿದವು. ಅಕ್ಟೋಬರ್ ಮೂರನೆಯ ವಾರದ ಎಳೆಯ ಚಳಿಗೆ ಉಲ್ಲನ್ ರಗ್ಗಿನ ಬೆಚ್ಚನೆಯ ಕಾವಿನಿಂದ ಹೊರಬಂದು, ಒಮ್ಮೆ ಮೈ ಮುರಿದು ಉಲ್ಲಾಸಗೊಂಡು ಕಣ್ಣು ತೆರೆದ. ಸ್ಕ್ರೀನ್ ಮಾಸಿ ಹೋಗಿದ್ದ ಮೊಬೈಲ್ ಫೋನಿನಲ್ಲಿ ಟೈಮು ನೋಡಿದ. ಏಳೂವರೆ ಗಂಟೆಯಾಗಿತ್ತು. ಭಾನುವಾರವಾದ್ದರಿಂದ ಹಾಸ್ಟೆಲ್ ಸೈಲೆಂಟಾಗಿತ್ತು. ತನ್ನ ರೂಮ್‌ಮೇಟ್ ನರಸಿಂಹ ಮೂರ್ತಿಯೂ ಸೇರಿದಂತೆ ಹತ್ತಿರದ ಊರುಗಳ ವಿದ್ಯಾರ್ಥಿಗಳು ನಿನ್ನೆಯ ದಿನವೇ ತಮ್ಮ ತಮ್ಮ ಊರುಗಳಿಗೆ ತೆರಳಿದ್ದರು. ಆದರೆ ಬ್ರೆಕ್ಟನ ಊರು ಬೆಂಗಳೂರಿನಿಂದ ನೂರೈವತ್ತು ಕಿಲೋಮೀಟರ್ ದೂರವಿರುವುದರಿಂದ ಅವನು ವಾರ ವಾರವೂ ಊರಿಗೆ ಹೋಗದೆ ತಿಂಗಳಿಗೊಮ್ಮೆ ಮತ್ತು ಹಬ್ಬ ಹರಿದಿನಗಳಲ್ಲಿ ಮಾತ್ರ ಊರಿಗೆ ಹೋಗುತ್ತಾನೆ. ರಜಾ ದಿನಗಳಲ್ಲಿ ಲೈಬ್ರರಿಯಲ್ಲಿ ಹೆಚ್ಚು ಕಾಲ ಕಳೆಯುತ್ತಾನೆ. ಕ್ಲಾಸಿಗೆ ಮೊದಲಿಗನಾಗಿರಬೇಕೆಂದು ಹಂಬಲಿಸುತ್ತಾ ಆ ಪ್ರಯತ್ನದಲ್ಲಿ ಸದಾ ತೊಡಗಿರುತ್ತಾನೆ. ಆದರೆ ಮುಗಿದಿರುವ ಎರಡು ಸೆಮಿಸ್ಟರುಗಳಲ್ಲೂ ಬೆಂಗಳೂರಿನ ಹುಡುಗಿಯರೇ ಮೇಲುಗೈ ಸಾಧಿಸಿದ್ದಾರೆ. ಬ್ರೆಕ್ಟನಿಗೆ ಕತೆ ಕವನಗಳನ್ನೂ ಬರೆಯುವ ಅಭ್ಯಾಸವಿದ್ದು ಕೆಲವೊಂದು ಸಣ್ಣಪುಟ್ಟ ಪತ್ರಿಕೆಗಳಲ್ಲಿ ಅವು ಪ್ರಕಟವೂ ಆಗಿ ಈಗಾಗಲೇ ಕ್ಯಾಂಪಸಿನಲ್ಲಿ ಯುವ ಸಾಹಿತಿಯೆಂದು ಹೆಸರು ಗಳಿಸಿದ್ದಾನೆ. ಕತೆ ಕವನಗಳನ್ನು ಬರೆಯುತ್ತಿರುವುದು ತನ್ನ ಬಣ್ಣ ಮತ್ತು ಜಾತಿಯ ಕೀಳರಿಮೆಯನ್ನು ಮೀರುವುದಕ್ಕೆಂದು ತನಗೆ ಗೊತ್ತಿಲ್ಲದೆಯೇ ತನ್ನ ಪ್ರಜ್ಞೆಯಲ್ಲಿ ಅಂತರ್ಗತವಾಗಿರುವುದು ಸ್ವತಃ ಬ್ರೆಕ್ಟನ ಅರಿವಿಗೂ ಬಂದಿರಲಿಲ್ಲ. ಫೋನ್ ರಿಂಗಾಗುವುದರೊಂದಿಗೆ ಎದ್ದು ಕುಳಿತು ''ಹಲೋ'' ಎಂದ. ''ಕಂಗ್ರಾಟ್ಸ್ ಮಿಸ್ಟರ್ ಬ್ರೆಕ್ಟ್'' ಮಧುರವಾದ ಹೆಣ್ಣಿನ ಧ್ವನಿ. ಬ್ರೆಕ್ಟ್ ಕ್ಷಣ ಕಕ್ಕಾಬಿಕ್ಕಿಯಾದ. ''ಯಾರು ಮೇಡಮ್, ಯಾಕೆ ಮೇಡಮ್'' ಎಂದ ತಡವರಿಸಿದವನಂತೆ. ''ರೀ, ಬ್ರೆಕ್ಟ್ ನಾನ್ರಿ ನಿಮ್ಮ ಕ್ಲಾಸ್‌ಮೇಟ್ ಅನೂಹ್ಯ. ನಿನ್ನೆ ಸಂಜೆ ದೀಪಾವಳಿ ವಿಶೇಷಾಂಕದಲ್ಲಿ ವಿದ್ಯಾರ್ಥಿ ವಿಭಾಗದಲ್ಲಿ ಪ್ರಶಸ್ತಿ ಪಡೆದ ನಿಮ್ಮ ಕತೆ ಓದಿದೆ. ತುಂಬಾ ಚೆನ್ನಾಗಿದೆ. ರಿಯಲಿ ನಮ್ಮ ಅಧ್ಯಯನ ಕೇಂದ್ರಕ್ಕೆ ನೀವೊಂಥರಾ ಗಿಫ್ಟ್ ಇದ್ದಂಗೆ ಕಣ್ರಿ. ಹತ್ತು ಸಾವಿರ ಬಹುಮಾನ ಬಂದಿದೆ, ಪಾರ್ಟಿ ಕೊಡ್ಬೇಕು. ನಿಮ್ಮ ಫ್ರೆಂಡ್ ಸಿದ್ಧಾರ್ಥನ ಹತ್ತಿರ ನಂಬರ್ ಇಸ್ಕೊಂಡು ಫೋನ್ ಮಾಡ್ತಾ ಇದ್ದೀನಿ'' ಎಂದಿದ್ದಳು. ಬ್ರೆಕ್ಟ್ ಏನೂ ಮಾತನಾಡಲು ತೋಚದೆ ''ಥ್ಯಾಂಕ್ಯೂ ಮೇಡಮ್, ಓಕೆ ಮೇಡಮ್'' ಎಂದಿದ್ದ. ''ಏನ್ರಿ ಬ್ರೆಕ್ಟ್, ಕ್ಲಾಸ್‌ಮೇಟನ್ನ ಮೇಡಮ್ ಮೇಡಮ್ ಅಂತ ಕರಿತಿದ್ದೀರಿ. ನಂಗೆ ಅನೂಹ್ಯ ಅಂತ ಹೆಸರಿದೇರಿ. ಅನೂಹ್ಯ ಅಂತ ಕರೀರಿ...'' ಎಂದು ಅವನು ಬಾಯಿ ತೆರೆಯುವ ಮೊದಲೇ ಫೋನ್ ಇಟ್ಟಿದ್ದಳು. ಬ್ರೆಕ್ಟನಿಗೆ ತನ್ನ ಕಿವಿಗಳನ್ನು ತಾನೇ ನಂಬಲಾಗಲಿಲ್ಲ. ನಾಲ್ಕು ತಿಂಗಳ ಹಿಂದೆ ಪ್ರಸಿದ್ಧ ದಿನಪತ್ರಿಕೆಯೊಂದು ದೀಪಾವಳಿ ವಿಶೇಷಾಂಕಕ್ಕೆಂದು ಆಹ್ವಾನಿಸಿದ್ದ ಕಥಾಸ್ಪರ್ಧೆಯ ವಿದ್ಯಾರ್ಥಿ ವಿಭಾಗಕ್ಕೆ ಕತೆಯೊಂದನ್ನು ಕಳುಹಿಸಿ ಆ ವಿಷಯವನ್ನು ಮರೆತೂ ಬಿಟ್ಟಿದ್ದ. ಅದರ ಫಲ ಅನೂಹ್ಯಳ ಧ್ವನಿಯ ಮೂಲಕ ತನ್ನ ಕಿವಿಗೆ ಬಿದ್ದು ಬ್ರೆಕ್ಟ್ ರೋಮಾಂಚನಗೊಂಡಿದ್ದ. ಹಾಸ್ಟೆಲ್ ಹೊರಗೆ ದಟ್ಟವಾಗಿ ಬೆಳೆದಿದ್ದ ಮರಗಳಲ್ಲಿ ನೆಲೆಸಿದ್ದ ಕೋಗಿಲೆಗಳ ಗುಂಪು ಬಿತ್ತರಿಸುತ್ತಿದ್ದ ಕುಹೂ ಕುಹೂ ಗಾನ ಕಿವಿಗಳನ್ನು ತುಂಬಿಕೊಂಡು ಬ್ರೆಕ್ಟನ ಶರೀರವಿಡಿ ಸಂಭ್ರಮದಿಂದ ಕಂಪಿಸಿತ್ತು. ಅನೂಹ್ಯ! ತನ್ನ ಕ್ಲಾಸ್‌ಮೇಟ್. ಇಡೀ ಅಧ್ಯಯನ ಕೇಂದ್ರದಲ್ಲಿ ಅಲ್ಲದೆ ಕ್ಯಾಂಪಸಿನಲ್ಲೇ ಸುಂದರಿ ಎಂದು ಹೆಸರು ಗಳಿಸಿದ್ದಾಳೆ. ಕ್ಲಾಸಿನ ಹುಡುಗರೆಲ್ಲ ಅವಳ ಕಡೆ ಕಣ್ಣು ನೆಟ್ಟರೂ ಅವಳು ಮಾತ್ರ ಯಾರೊಂದಿಗೂ ಕಣ್ಣು ಬೆರೆಸಿ ಮಾತನಾಡಿದವಳಲ್ಲ. ಬ್ರೆಕ್ಟ್ ಕೂಡ ಎಷ್ಟೋ ಸಾರಿ ಕದ್ದು ಕದ್ದು ಅವಳ ಚೆಲುವನ್ನು ಕಣ್ಣು ತುಂಬಿಕೊಂಡಿದ್ದಾನೆ. ಅವಳು ಯಾರನ್ನೂ ಹಚ್ಚಿಕೊಳ್ಳುತ್ತಿರಲಿಲ್ಲ. ಜಾನಪದ ತಜ್ಞರಾದ ಯುವ ಪ್ರಾಧ್ಯಾಪಕ ಚೆಲುವೇಗೌಡರು ಅವಳ ಬಳಿ ಸ್ನೇಹ ಯಾಚಿಸಲು ಹೋಗಿ ಮಂಗಳಾರತಿ